ಪೈಸೆ ದುಡ್ಡಿಲ್ಲ. ಅವಲಕ್ಕಿ, ಉಂಡಿಗಳ ಜೊತೆ ಅಕ್ಕಿ ಕೂಡ ಮಾಯ. ಏನೋ ಅಪಾಯದ ಮುನ್ಸೂಚನೆ ದೊರೆತ ಮನ ಆತಂಕಿತವಾಗಿ ಎದೆ ಡವಡವಿಸಿತು. ಹಾಗಾದರೆ, ಇವ ನನ್ನನ್ನು ಒಬ್ಬಂಟಿಯಾಗಿ ಬಿಟ್ಟು ಹೋದನೇ? ಛೇ! ಇರಲಿಕ್ಕಿಲ್ಲ. ಧೈರ್ಯ ತಂದುಕೊಂಡು ಕಾದೆ. ಅಗ್ನಿಸಾಕ್ಷಿಯಾಗಿ ಕೈ ಹಿಡಿದವ. ಏನೋ ಕೆಲಸದ ಮೇಲೆ ಹೋಗಿದ್ದಾನು, ಬರುತ್ತಾನೆ ಎಂದು ನಾನೇ ಸಂತೈಸಿಕೊಂಡೆ. ಎರಡು ದಿನಗಳು ಕಳೆದವು. ಅವನ ಸುದ್ದಿಯೇ ಇಲ್ಲ. ಏನಾದರೂ ಅಪಘಾತವಾಗಿ ಬರಲಾರದಂಥ ತೊಂದರೆಯಾಗಿದ್ದರೆ? ಅನುಮಾನ ಕಾಡಿತು. ಅಕ್ಕಪಕ್ಕದ ಗಂಡಸರು ಕುಹಕ ನೋಟ ಬೀರುತ್ತ 'ಕೃಷ್ಣಾಜಿ ಬಂದನೇ?' ಎಂದು ಕೇಳುವುದು ಕಂಡು ಹೆದರಿಕೆಯಾಯಿತು. ನನ್ನ ನಾಲ್ಕಾರು ಸೀರೆಗಳನ್ನು ಬಿಟ್ಟು ಮನೆಯಲ್ಲೇನೂ ಇಲ್ಲ. ಅವುಗಳ ಜೊತೆಯಲ್ಲೇ ಮರೆಯಲ್ಲಿದ್ದ ಜೋಳದ ಹಿಟ್ಟಿನ ಪುಟ್ಟ ಗಂಟು ನನ್ನನ್ನು ಬದುಕಿಸಿತ್ತು. ಮೂರನೇ ದಿನ ಒಪ್ಪತ್ತು ಗಂಜಿಯಾಯಿತು. ನಾಲ್ಕನೇ ದಿನ ನೀರೇ ಗತಿಯಾಯಿತು. ಇಷ್ಟು ಜನ ಗಂಡಸರ ನಡುವೆ ಒಂಟಿ ಹೆಂಗಸು. ಹೇಗಿದ್ದೆನೋ ಗೊತ್ತಿಲ್ಲ. ಮನೆಯ ಬಾಗಿಲು ತೆರೆಯದೇ ಕುಳಿತುಬಿಟ್ಟೆ. ಏನು ಮಾಡಲಿ? ಪತ್ರ ಹಾಕಿದರೆ ಮುಟ್ಟಲು ವಾರವೋ ತಿಂಗಳೋ ಬೇಕು. ತವರಿಗೆ ಫೋನ್ ಮಾಡಲೇ? ಬೇಡ ಹೆದರುತ್ತಾರೆ. ದೊಡ್ಡಣ್ಣ ಹೊರಟು ಬರಬಹುದು. ಆದರೆ, ಫೋನ್ ಮಾಡಲು ದುಡ್ಡೆಲ್ಲಿದೆ? ರಾಧಾವೈನಿಯ ನೆಂಟರಿದ್ದಾರೆ. ಆದರೆ, ಎಲ್ಲಿ ಎಂದು ಗೊತ್ತಿಲ್ಲ. ಕೊನೆಗೆ ಉಳಿದವಳೇ ಜೀವಕ್ಕ. ಅವ್ವನ ಗೆಳತಿ. ವಿಠೋಬಾನ ಗುಡಿ ಎದಿರು ಅಷ್ಟೇಕರ ಚಾಳ—ಅಷ್ಟೇ ನೆನಪಿತ್ತು. ಸೋತ ದೇಹವನ್ನೆಳೆದುಕೊಂಡು ಹೊರಟೆ.

ಬಾಗಿಲು ತೆಗೆಯುವುದೇ ತಡ, "ಕೃಷ್ಣಾಜಿ ಬಂದನೇ?" ಎಂಬ ಪ್ರಶ್ನೆಗಳು. "ಹ್ಞೂಂ... ನಿನ್ನೆ ರಾತ್ರಿಯೇ ಬಂದರು" ಎಂಬ ಉತ್ತರ ಕೇಳಿ ಅವರ ಮುಖ ಸಪ್ಪಗಾಗಿತ್ತು. ಇಲ್ಲಿ ಏನಾದರೂ ಸಂಚಿರಬಹುದೆ ಎಂಬ ಭಾವ ಕಾಡಿತು. ಜೊತೆಗೆ, ಅವ ಬಿಟ್ಟು ಹೋದನೆಂದು ಮನ ಇನ್ನೂ ಒಪ್ಪುತ್ತಿಲ್ಲ. ದಾರಿಯಲ್ಲಿ ಒಬ್ಬಿಬ್ಬರನ್ನು 'ಅಷ್ಟೇಕರ ಚಾಳ' ಎಂದು ಕೇಳಿದೆ. ಮರಾಠಿ ಅರ್ಥವಾಗುತ್ತಿತ್ತು. ಆದರೆ, ಮಾತನಾಡಲು ಬರುತ್ತಿರಲಿಲ್ಲ. ಒಬ್ಬ ರಿಕ್ಷಾವಾಲ ಬಂದು, "ಮೀಟರ್ ವರ ದ್ಯಾ. ವೀಸ ರುಪಾಯ ಹೋತೆ. ಬಸಾ (ಮೀಟರ್ ಮೇಲೆ ದುಡ್ಡು ಕೊಡಿ. ಇಪ್ಪತ್ತು ರೂಪಾಯಿಗಳಾಗಬಹುದು. ಬನ್ನಿ)" ಎಂದ. ಕೊಡಲು ದುಡ್ಡೆಲ್ಲಿತ್ತು? ಮೈಮೇಲಿದ್ದ ಚಿನ್ನವನ್ನು ಮಾರಬಹುದಿತ್ತು. ಆದರೆ, ಅಂಗಡಿ ಗೊತ್ತಿಲ್ಲ. ನಂಬಿಕೆ ಇಲ್ಲ. ಬರೀ ದಾರಿ ಕೇಳಿದೆ. ವಿಚಿತ್ರ ಪ್ರಾಣಿಯಂತೆ ನೋಡಿ ದಾರಿ ತೋರಿಸಿ ಹೋದ. ಹಿಂದೆಯೇ ಇನ್ನೊಬ್ಬ ರಿಕ್ಷಾದವ, "ಭಾಳ ದೂರದ ತಂಗಿ. ಹೆಂಗ ಹೊಕ್ಕಿರಿ? ಕೂಡ ಬರ್ರಿ. ಬಿಡತೇನಿ" ಎಂದ. "ಬ್ಯಾಡ ಅಣ್ಣಾ. ನನ್ನ ಕಡೆ ರೊಕ್ಕಿಲ್ಲ" ಎಂದೆ. "ಇರ್ಲಿ ಬರ್ರಿ. ಮನಿ ಕಡೆನ ಹೊಂಟೇನಿ. ಬಿಟ್ಟು ಹೋಗ್ತೇನಿ" ಎಂದ. ಹತ್ತಿ ಕುಳಿತುಕೊಂಡೆ. ಎಂಥ ಅಪಾಯವನ್ನೂ ಎದುರಿಸಲು ಸಿದ್ಧಳಾಗಿದ್ದೆ. ಅವನು ಬಿಟ್ಟಿದ್ದರಿಂದ ಪಾರಾದೆ. ಇಲ್ಲವಾದರೆ ಸೋತ ದೇಹ ಮಧ್ಯೆ ಎಲ್ಲಿಯೋ ಧರೆಗುರುಳುತ್ತಿತ್ತು. ಸರಿಯಾಗೇ ತಲುಪಿಸಿದವನಿಗೆ ಕಣ್ತುಂಬಿ ಕೈ ಮುಗಿದೆ. ಇಳಿದು ನೋಡಿದಾಗ ಸುಮಾರು ಐವತ್ತು ಮನೆಗಳು. "ವಾಮನರಾವ್ ವಾಟ್ವೆ. ಜೀವೂಬಾಯಿ..." ಎಂದು ಕೇಳಿದೆ. ಯಾರೋ ಐದನೇ ಮನೆಯತ್ತ ಕೈತೋರಿಸಿದರು. ಬಾಗಿಲ ಮುಂದೆ ನಿಂತು "ಜೀವಕ್ಕ ಮೌಶಿ..." ಎಂದು ಜೋರಾಗಿ ಕೂಗಿದೆ. ಹೊರಗೆ ಬಂದ ಅವ್ವನ ವಯಸ್ಸಿನ ಹೆಣ್ಣುಮಗಳು ನನ್ನನ್ನು ಗುರುತಿಸದಾದಾಗ, "ನಾನು ಉಗಾರದ ಪದ್ಮಾವತಿ ಮಗಳು... ರುಕ್ಮಿಣಿ... ರುಕ್ಕು" ಎಂದೆ. "ಅಯ್ಯಯ್ಯ... ಗುರುತ ಹತ್ತಲಿಲ್ಲವಾ. ಭಾಳ ದಿವಸಾತು ಬಾ... ಬಾ..." ಎಂದು ಒಳಗೆ ಕರೆದರು. "ಥೇಟ್ ಅವ್ವನಗತೆನ ಇದ್ದಿ" ಎಂದು ತಬ್ಬಿಕೊಂಡಳು. ಜೀವಕ್ಕ ಜೀವ ಉಳಿಸಿದಳು.

ಗಂಟಲಿಗೊಂದಿಷ್ಟು ಬಿಸಿ ಚಹಾ ಬಿದ್ದ ಮೇಲೆ ನನ್ನ ಕಥೆಯನ್ನೆಲ್ಲ ಹೇಳಿದೆ. ಹೇಳಲೇಬೇಕಿತ್ತಲ್ಲ. ಮುಂದಿನ ದಾರಿ ಸ್ಪಷ್ಟವಾಗಬೇಕಿತ್ತು. ಎಲ್ಲ ಕೇಳಿ ವಾಮನ ಕಾಕಾ, "ನಿಮ್ಮನ್ಯಾಗ ಯಾರೂ ಸಮಾ